# ಕಾಯುವ ದೈವವೂ, ಕೊಲ್ಲುವ ಮಾನವನೂ

ತಾಯಿ, ತಾಯ್ತನ ಇವು ನಾವು ದಿನನಿತ್ಯ ಕೇಳುವ ಹಳೆಯದಾದ ಮಾತುಗಳು. ತಾಯಿ ಎನ್ನುವ ಮಾತೇ ಪೊರೆಯುವಂತದ್ದು. ಕೇಡಿನಿಂದ ದೂರವಿಡುವಂತದ್ದು ಎಂಬ ಅರ್ಥ ವಿನ್ಯಾಸವನ್ನು ಹೊಮ್ಮಿಸುವಂತದ್ದು. ತನ್ನ ಕರುಳಬಳ್ಳಿಯಿಂದ ಪ್ರತ್ಯೇಕವಾಗಿ ತನ್ನದೇ ದೇಹದ ಭಾಗವಾದ ಸಂತಾನದ ಬಗ್ಗೆ ಆಕೆಗೆ ಮಿತಿಮೀರಿದ ಕಕ್ಕುಲಾತಿ. ಮಡಿಲಲ್ಲಿ ಮಲಗಿ ಬೆಳೆದ ಮಗು ಅಂಬೆಗಾಲಿಡುತ್ತಾ, ತಪ್ಪು ಹೆಜ್ಜೆ ಇಡುತ್ತಾ– ನಡೆವ ಬೆಡಗನ್ನು ತಾಯಿ ಕಣ್ಣು ಎಚ್ಚರದಿಂದ ಕಾಯುತ್ತದೆ. ಕೂಸು ವಯಸ್ಕನಾಗಿ ಬೆಳೆದಾಗಲೂ ಈ ಎಚ್ಚರದ ಕಣ್ಣು ನಿರಂತರವಾಗಿಯೇ ಹಿಂಬಾಲಿಸುತ್ತದೆ. ಹೆಣ್ಣಿಗೆ ಮಾತ್ರ ತಾಯ್ತನ ಆರೋಪಿಸಲಾಗದು. ಗಂಡಿಗೂ ಕೂಡ ಈ ತಾಯ್ತನ ಗುರುತಿಸಲಾಗದೆ, ತೋರಿಸಲಾಗದ ರೀತಿಯಲ್ಲಿ ಸುಪ್ತವಾಗಿರುತ್ತದೆ. ಆದರೆ ಅದು ನಿರಂತರವಾಗಿ ಕಾಯುವ, ಪೊರೆಯುವ ರೀತಿಯಲ್ಲಿರುವುದಿಲ್ಲವಷ್ಟೇ.

ತಾಯ್ತನ ಎಂದಾಗ ನೆನಪಾಗುವುದು ಮಾತೃದೇವತೆಗಳನ್ನು ನಮ್ಮ ಗ್ರಾಮೀಣರು ಆರಾಧಿಸುವ, ಪೂಜಿಸುವ ಹಲವು ಭಿನ್ನ ನೆಲೆಗಳು. ಒಳಿತು–ಕೆಡುಕು ಎಂಬ ಮೌಲ್ಯಗಳು ಎಲ್ಲ ದೇವತೆಗಳಲ್ಲೂ, ರಾಕ್ಷಸರಲ್ಲೂ, ಮಾನವರಲ್ಲೂ ಇವೆ. ದೇವತೆಗಳಲ್ಲೂ ಕಾಯುವ ತಾಯ್ತನದ ದೇವತೆಗಳು ಹಲವರು ಇದ್ದಾರೆ. ಸಾಧಾರಣವಾಗಿ ಗ್ರಾಮಗಳಲ್ಲಿ ಗ್ರಾಮದೇವತೆಗಳ ಗುಡಿಯೊಂದಿದ್ದು ಅದನ್ನು ಊರವ್ವ ಎಂದು ಕರೆಯಲಾಗುತ್ತದೆ. ಊರವ್ವ ಎಂದರೆ 'ಮಾರಿ' ಎಂಬ ಸಾಮಾನ್ಯ ಬಳಕೆಯ ಅರ್ಥವಿದೆ. ಊರು ಎಂದ ಮೇಲೆ ಹನುಮಂತನಗುಡಿ, ಶಿವನ ಗುಡಿ, ಮಾರಮ್ಮನ ಗುಡಿಗಳು ಇದ್ದೇ ಇರುತ್ತವೆ. ಅನಾದಿ ಕಾಲದಿಂದಲೂ ಗ್ರಾಮೀಣರು ಈ ದೈವಗಳನ್ನು ತಮ್ಮ ಬದುಕಿನ ಏಳುಬೀಳುಗಳೊಂದಿಗೆ ಗುರುತಿಸಿಕೊಂಡಿದ್ದಾರೆ. ಒಡನಾಟವಿಟ್ಟುಕೊಂಡಿದ್ದಾರೆ. ಇತ್ತೀಚೆಗೆ ಈ ದೇವತೆಗಳೊಂದಿಗೆ ಇತರ ದೇವತೆಗಳೂ ಕೂಡ ಕಾಣಿಸಿಕೊಳ್ಳುತ್ತಿವೆ. ಒಂದು ದೇವಾಲಯವೆಂದರೆ ಒಂದು ಗರುಡಗಂಭ, ನಂದಿ, ನವಗ್ರಹಗಳು, ಗಣೇಶ, ಹನುಮಂತ, ಶಿವ, ರಾಮ, ಕೃಷ್ಣ ಇವೆಲ್ಲ ಇರಲೇಬೇಕು. ಇರಲೇಬೇಕು ಎಂದು ಗೊತ್ತುವಳಿ ಮಾಡಿದಂತೆ ತೋರುತ್ತದೆ. ಲಯಕರ್ತನೂ, ದೃಷ್ಟಿಕರ್ತನೂ ಎಂದು ಕರೆಸಿಕೊಂಡ ಶಿವ ಪರ್ವತದಲ್ಲಿ ಹುಟ್ಟಿ ಪರ್ವತದ ಪರಿಸರಕ್ಕೆ ತಕ್ಕಂತೆ ತನ್ನ ವೇಷ ಭೂಷಣಗಳನ್ನು ಹೊಂದಿದವನು. ಶಿವನ ದೇವಾಲಯದ ಆವರಣದೊಳಗೇ ಇತರ ದೇವತೆಗಳೆಲ್ಲಾ ತೂರಿಕೊಂಡಂತೆ ಕಾಣುತ್ತವೆ. ಶಿವ ನಡೆದಾಡುವ ದೇವಭೂಮಿ ಎಂದು ಕರೆಸಿಕೊಂಡ ಉತ್ತರಾಖಂಡದಲ್ಲಿ ಕಾಣುವ ಪುರಾತನ ದೇಗುಲಗಳಲ್ಲೂ ಆಗಿರುವ ಈ ಹೊಸ ಸೇರ್ಪಡೆಗಳು ದೈವವನ್ನು ಕುರಿತಾದ ಮಾನವನ ಹೊಂದಾಣಿಕೆಯ ಸುಧಾರಣಾವಾದವನ್ನು ಎತ್ತಿ ಹಿಡಿಯುತ್ತದೆ.

ದೇವತೆಗಳ ಸ್ವಭಾವಾನುಸಾರಿಯಾಗಿ ದೇವಗಣ, ರಾಕ್ಷಸಗಣ ಎಂದು ಎರಡು ವಿಧದಲ್ಲಿ ನೋಡುವ ಸಾಮಾನ್ಯ ಬಳಕೆ ಇದೆ. ಈ ವಿಂಗಡಣೆ ಅವುಗಳ ಹುಟ್ಟು, ಆಹಾರ ಕ್ರಮ, ಪೂಜಿಸುವ ಜನತೆಯ ಆಧಾರದ ಮೇಲೆ ಆಗುತ್ತದೆ. ಹೀಗಾಗಿಯೇ ದೇವತೆಗಳಲ್ಲಿಯೇ ಶಿಷ್ಟ ದೇವತೆಗಳು, ಗ್ರಾಮೀಣ ದೇವತೆಗಳು ಎಂಬ ವಿಂಗಡಣೆ ಮಾಡಿಕೊಳ್ಳಲಾಗಿದೆ. ಶಿಷ್ಟ ದೇವತೆಗಳು ಸಸ್ಯಾಹಾರಿಗಳಾಗಿದ್ದು ಮೇಲ್ವರ್ಗದವರಿಂದ ಪೂಜಿಸಲ್ಪಡುತ್ತವೆ. ಗ್ರಾಮೀಣ ದೇವತೆಗಳಾದ ಮಾರಮ್ಮ, ಚೌಡಮ್ಮ, ಜಲಗೇರಮ್ಮ ಮುಂತಾದ ದೇವತೆಗಳು ಆಯಾ ಪ್ರಾದೇಶಿಕ ನಂಬಿಕೆಗಳಿಗೆ ಅನುಗುಣವಾಗಿ ಮಾಂಸಾಹಾರಿ ಆಗಿರುತ್ತಾರೆ. ಅದರಲ್ಲೂ ಮಾರಿದೇವತೆ ಎಲ್ಲ ಭಾಗಗಳಲ್ಲೂ ಪೂಜಿಸಲ್ಪಡುವ ಭಕ್ತಾದಿಗಳ ದೇವತೆಯಾಗಿದ್ದಾಳೆ.

ಊರವ್ವ, ಊರಮಾರಿ, ಗ್ರಾಮದೇವತೆ ಎಂದು ಕರೆಸಿಕೊಳ್ಳುವ ಮಾರಮ್ಮ ಊರನ್ನು, ಊರಿನ ಸಮಸ್ತ ಜೀವಸಂಕುಲಗಳನ್ನು ವ್ಯಾಧಿ– ಪೀಡೆಗಳಿಂದ ಕಾಯುವವಳು ಎಂಬ ನಂಬಿಕೆ, ಭಯ ಈಗಲೂ ಗ್ರಾಮೀಣ ಪ್ರದೇಶಗಳಲ್ಲಿವೆ. ಕೆಲವು ಭಾಗಗಳಲ್ಲಿ ವಿವಿಧ ರೀತಿಯ ಮಾರಿಯ ಆಕಾರವನ್ನು ಮರದಲ್ಲಿ ಕೆತ್ತಿಸಿ ಆ ಮೂರ್ತಿಯನ್ನು ಪೂಜಿಸಿ ಊರಿಂದ ಹೊರಗೆ ನಿಲ್ಲಿಸುವ, ಆ ಮೂಲಕ ರೋಗ– ಪಿಡುಗುಗಳಿಂದ ದೂರ ಉಳಿಯುವ ಆಚರಣೆಗಳೂ ನಮ್ಮ ಪೂರ್ವಿಕರಲ್ಲಿ ಮನೆ ಮಾಡಿವೆ. ಬಹಳ ಹಿಂದೆ ಪ್ಲೇಗ್, ಕಾಲರಾ ಪಿಡುಗುಗಳು ಕಾಲಿಟ್ಟಾಗ 'ಪ್ಲೇಗಮ್ಮ, ಕಾಲರದ ಅಮ್ಮ' ಎಂದು ಪೂಜಿಸಿ ಅವುಗಳನ್ನು ಊರಿಂದ ಹೊರಗೇ ಇಡುವ ಆಚರಣೆಗಳು ನಮ್ಮಲ್ಲಿ ಚಾಲ್ತಿಯಲ್ಲಿದ್ದುದು ತಿಳಿದು ಬರುತ್ತದೆ.

ಮೇಲ್ವರ್ಗದ ಹೆಣ್ಣು ಮಗಳೊಬ್ಬಳು ಶೂದ್ರನೊಬ್ಬನನ್ನು ಮದುವೆಯಾಗಿ ತಾನು ಕುಲಗೆಟ್ಟು ವರ್ಣಸಂಕರಕ್ಕೆ ಈಡಾದೆನೆಂದು ಶೋಕಿಸುತ್ತಾಳೆ. ತನ್ನ ಕುಲವನ್ನು ತನ್ನ ಸುಳ್ಳಿನಿಂದ ಹಾಳು ಮಾಡಿದ ಆ ಶೂದ್ರನನ್ನು, ಶೂದ್ರನಿಂದ ಹುಟ್ಟಿದ ಮಕ್ಕಳನ್ನು ಶಪಿಸುತ್ತಾಳೆ. ಆ ಶೂದ್ರನಿಗೆ ಮತ್ತೆ ಮತ್ತೆ ಭೂಮಿಯಲ್ಲಿ ಹುಟ್ಟಿ ಕೋಣದ ರೂಪದಲ್ಲಿ ಬಲಿ ತೆಗೆದುಕೊಳ್ಳುತ್ತೇನೆ ಎಂಬ ಶಾಪ ನೀಡುತ್ತಾಳೆ. ಮಕ್ಕಳನ್ನು ಆನಂತರ ಕ್ಷಮಿಸುತ್ತಾಳೆ. ಈಕೆಯ ಅವತಾರವನ್ನೇ ಮಾರಿ ಎಂದು ಕರೆಯಲಾಗುತ್ತದೆ. ಎಷ್ಟೋ ವರ್ಷಗಳಿಂದ ಕೋಣದ ಬಲಿ ಕೊಡುವುದನ್ನು ನಿಲ್ಲಿಸಲಾಗಿದೆ. ಈಗ ಆಕೆ ಉರಿಮಾರಿಯಾದರೂ ಊರ ಕಾಯುವ ಊರವ್ವನಾಗಿದ್ದಾಳೆ.

ಈ ದೇವತೆಯ ಹಬ್ಬವೆಂದರೆ ಈಗಲೂ ಗ್ರಾಮೀಣ ಪ್ರದೇಶಗಳಲ್ಲಿ ಸಂಭ್ರಮ, ಸಡಗರ ಜೊತೆ ಭೀತಿಯೂ ಕಂಡು ಬರುತ್ತದೆ. ಈ ಹಬ್ಬಕ್ಕಾಗಿ ತಮ್ಮ ಸಮಸ್ತ ಬಂಧುಗಳನ್ನು ಆಹ್ವಾನಿಸುತ್ತಾರೆ. ತಂಬಿಟ್ಟಿನ ಕುಳಿಯಲ್ಲಿ ದೀಪ ಹಚ್ಚಿ ಸುತ್ತ ಹೊಂಬಾಳೆ ಸಿಕ್ಕಿಸಿ ಮಧ್ಯೆ ಕಳಶವಿರಿಸಿ ಪ್ರತಿಯೊಂದು ಮನೆಯಿಂದಲೂ ತಂಬಿಟ್ಟಿನ ಆರತಿ ಗುಡಿಗೆ ಹೋಗುತ್ತದೆ. ನಾನಾ ಕಾರಣಕ್ಕಾಗಿ ಹರಸಿಕೊಂಡ ಭಕ್ತರು ಕೊಂಡ ಹಾಯುತ್ತಾರೆ. ಬಹುತೇಕ ಮಾಂಸಾಹಾರಿಗಳ ಮನೆಯಲ್ಲಿ ಕುರಿ, ಕೋಳಿಗಳನ್ನು ಬಲಿ ಕೊಟ್ಟರೆ, ಸಸ್ಯಾಹಾರಿಗಳು ಸಿಹಿ ಅಡುಗೆಯನ್ನು ಮಾಡಿ ಉಣ್ಣುತ್ತಾರೆ. ಬಂದ ಅತಿಥಿ, ಬಂಧು– ಬಾಂಧವರಿಗೆ ಉಣಲಿಟ್ಟು ಆನಂದ ಪಡುತ್ತಾರೆ. ಭಿನ್ನ ಭಿನ್ನ ಜೀವನ ವಿಧಾನಗಳಿದ್ದರೂ ಪರಸ್ಪರ ಆಹಾರ– ಉಡುಗೆಯ ಬಗ್ಗೆ ಸಹಿಷ್ಣುತೆ, ಪ್ರೀತಿ ಇದ್ದುದರಿಂದಲೇ ಅಂದಿನ ಗ್ರಾಮಜೀವನ ಯಾವುದೇ ತಕರಾರುಗಳಿಲ್ಲದೆ ಸೌಹಾರ್ದತೆಯಿಂದ ಕೂಡಿತ್ತು. ಇದೆಲ್ಲವನ್ನೂ ನಾವು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕಿದೆ. ಕಾಯುವ ದೈವಕ್ಕೆ ಬಡವ, ಬಲ್ಲಿದ, ಮೇಲ್ವರ್ಗ ಕೆಳವರ್ಗ, ಹೆಣ್ಣು– ಗಂಡು ಎಂಬ ಪ್ರತ್ಯೇಕತೆ ಎಂದೂ ಇರಲಿಲ್ಲ. ಕಾಯುವ ದೈವಕ್ಕೆ ಇಲ್ಲದ ವ್ಯತ್ಯಾಸಗಳು ಕೊಲ್ಲುವ ಮಾನವನಿಗಾದರೂ ಯಾಕೆ ಬೇಕು ಹೇಳಿ?

**■ಅಮೃತಮತಿ**

## ಮಾತೇ ಮುತ್ತು

★ ಸುಳ್ಳುಗಾರನನ್ನು ಸತ್ಯ ಹೇಳುತ್ತಿದ್ದರೂ ಯಾರೂ ನಂಬುವುದಿಲ್ಲ.

-ಈಸೋಪ

★ ಒಳ್ಳೆಯದೆಲ್ಲವೂ ಕಷ್ಟ; ಕೆಟ್ಟದ್ದೆಲ್ಲವೂ ಸುಲಭ. ಸುಲಭವಾದದ್ದರಿಂದ ದೂರವಿರಿ.

-ಸ್ಕಾಟ್ ಅಲೆಕ್ಸಾಂಡರ್

★ ದೇವರು ಯಾವತ್ತೂ ದೊಡ್ಡ ಸೈನ್ಯದ ಪರವಾಗಿರುತ್ತಾನೆ.

-ಜಾರ್ಜ್ ಬರ್ನಾರ್ಡ್ ಷಾ

★ ಪ್ರಜಾಪ್ರಭುತ್ವ ಎಂದರೆ ನೀವು ಬಯಸ್ಸಿದ್ದನ್ನೇ ನೀವು ಹೇಳುವುದು ಮತ್ತು ನೀವು ಹೇಳಿದ್ದನ್ನೇ ಮಾಡುವುದು.

-ಡೇವ್ ಬರ್ರಿ

★ ಹಿರಿಯರು ಹೇಳುವುದನ್ನು ಮಕ್ಕಳು ಯಾವತ್ತೂ ಗಮನವಿಟ್ಟು ಕೇಳುವುದಿಲ್ಲ. ಆದರೆ ಅವರು ಹಿರಿಯರನ್ನು ಸದಾ ಅನುಕರಿಸುತ್ತಾರೆ.

-ಜೇಮ್ಸ್ ಬಾಲ್ಡ್‌ವಿನ್

★ ವರ್ಷಗಳ ಕಾಲ ವಿಫಲವಾದವನಿಗೆ ಒಂದು ನಿಮಿಷದಲ್ಲಿ ಯಶಸ್ಸು ದಕ್ಕುತ್ತದೆ.

-ರಾಬರ್ಟ್ ಬ್ರೌನಿಂಗ್

★ ನಿನ್ನ ತಪ್ಪುಗಳನ್ನು ಎತ್ತಿ ಹೇಳುವ ಗೆಳೆಯನನ್ನು ಗೌಪ್ಯ ನಿಧಿಯಂತೆ ಕಾಪಾಡು.

-ಗೌತಮ ಬುದ್ಧ

★ ಕೆಡುಕು ವಿಜೃಂಭಿಸಬೇಕೆಂದಿದ್ದರೆ ಸಜ್ಜನರು ಕೈಕಟ್ಟಿ ಕುಳಿತುಕೊಳ್ಳಬೇಕು.

-ಎಡ್ಮಂಡ್ ಬರ್ಕ್